ದಿನಾಂಕಃ  24.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 15 ರಿಂದ 17 ನೇ ಪ್ರತಿವಾದಿಯರ ಪರ ಶ್ರೀ ಬಿ. ಕೆ. ಜೆ ವಕೀಲರಿಂದಃ</u>**

ನಮ್ಮ ತಂದೆಯ ಖುದ್ದು ಊರು ಗೋಕಾಕ ತಾಲ್ಲೂಕಿನ ಒಂದು ಹಳ್ಳಿ ಇರುತ್ತದೆ. ನಮ್ಮ ತಂದೆಗೆ ನಾವು ಒಟ್ಟು 10 ಜನ ಮಕ್ಕಳು. ನನ್ನ ತಂದೆ ಹಳ್ಳಿಯಿಂದ ಗೋಕಾಕ ಪಟ್ಟಣಕ್ಕೆ ಬಂದು ಹೊಟೇಲ್ ಕೆಲಸ ಹಾಗೂ ಬಡಗಿತನ ಕೆಲಸ ಮಾಡಲು

ಪ್ರಾರಂಭಿಸಿದ್ದರು. ನನ್ನ ತಂದೆ ಗೋಕಾಕಕ್ಕೆ ಅಂದಾಜು 70 ವರ್ಷಗಳ ಹಿಂದೆ ಅಂದರೆ ನಾನು ಹುಟ್ಟುವುದಕ್ಕಿಂತ ಮುಂಚೆಯೇ ಬಂದಿರುತ್ತಾರೆ. ನನ್ನ ತಂದೆ ಸನ್ 1960 ರಲ್ಲಿ ದೆಹಲಿ ರೇಡಿಮೆಡ್ ಸ್ಟೋರ್ಸ ಎಂಬ ಬಟ್ಟೆ ಅಂಗಡಿಯನ್ನು ಪ್ರಾರಂಭಿಸಿದ್ದರು ಎಂದರೆ ನಿಜ. ನಮ್ಮ ಕುಟುಂಬದವರು ನಡೆಸುತ್ತಿರುವ ಎಲ್ಲಾ ಅಂಗಡಿಗಳು ದೆಹಲಿ ಎಂಬ ಬ್ರ್ಯಾಂಡ ಹೆಸರಿನಿಂದ ಇರುತ್ತವೆ. ಗೋಕಾಕ ಪಟ್ಟಣದಲ್ಲಿ ನಮ್ಮ ಕುಟುಂಬದವರ ಒಟ್ಟು 10 ಬಟ್ಟೆ ಅಂಗಡಿಗಳು ಇರುತ್ತವೆ. ಸದರೀ ಬಟ್ಟೆ ಅಂಗಡಿಗಳನ್ನು ಅವರವರು ನೋಡಿಕೊಳ್ಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಅಂಗಡಿಯನ್ನು ನಾನೇ ನೋಡಿಕೊಳ್ಳುತ್ತೇನೆ.

ನಮ್ಮ ಕುಟುಂಬಕ್ಕೆ ಕೇವಲ ಒಂದೇ ಜಮೀನು ಇರುತ್ತದೆ. ಸಾಕ್ಷಿ ಮುಂದುವರೆದು ಸದರೀ ಜಮೀನನ್ನು ನಮ್ಮ ಅಣ್ಣಂದಿರಾದ ರಾಮಚಂದ್ರ ಮತ್ತು ಕೋಣಪ್ಪ ಮಾರಾಟ ಮಾಡಿರುತ್ತಾರೆ. ಸದರೀ ಪ್ರಕರಣದಲ್ಲಿ 04 ಜಮೀನುಗಳನ್ನು ದಾವಾಸ್ತಿಗಳನ್ನಾಗಿ ತೋರಿಸಿರುತ್ತಾರೆಂದರೆ ನಿಜ. ಸದರೀ ಎಲ್ಲಾ ದಾವಾ ಜಮೀನುಗಳು ನೀರಾವರಿ ಜಮೀನುಗಳಾಗಿರುತ್ತವೆ ಎಂದರೆ ನಿಜ. ಸಾಕ್ಷಿ ಮುಂದುವರೆದು 04 ಜಮೀನುಗಳನ್ನು ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆ ದಾವಾಸ್ತಿಗಳಲ್ಲಿ ತಮ್ಮ ಮಕ್ಕಳ ಮದ್ಯೆ ಪಾಲು ವಾಟ್ನಿ ಮಾಡಿಕೊಟ್ಟಿರುವುದಿಲ್ಲ. ನಮ್ಮ ಎಲ್ಲಾ ಮಕ್ಕಳ ಮದುವೆಯನ್ನು ನಮ್ಮ ಅಣ್ಣಂದಿರಾದ ರಾಮಚಂದ್ರ ಮತ್ತು ಲಕ್ಷ್ಮಣ ಮಾಡಿರುತ್ತಾರೆ.

ನನ್ನ ತಂದೆ ಸನ್ 2021 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಪ್ರಸ್ತುತ ಪ್ರಕರಣದಲ್ಲಿ ತಮ್ಮ ತಕರಾರರನ್ನು ಸಲ್ಲಿಸಿರಲಿಲ್ಲ. ನಮ್ಮ ತಂದೆಗೆ ರಾಮಚಂದ್ರ ಮತ್ತು ಲಕ್ಷ್ಮಣ ಇಬ್ಬರು ಹಿರಿಯ ಮಕ್ಕಳು ಅಂದರೆ ( ಅವಳಿ-ಜವಳಿ). ನಮ್ಮೆಲ್ಲರ

ಮದುವೆಯನ್ನು ರಾಮಚಂದ್ರ ಮತ್ತು ಲಕ್ಷ್ಮಣ ಮಾಡಿರುತ್ತಾರೆಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

ನಮ್ಮ ತಾಯಿ ಸುಮಾರು 20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ತಾಯಿಯು ಗೌಳಿ ಗಲ್ಲಿಯಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿದ್ದಳು. ನಮ್ಮ ಮೂಲ ಮನೆ ಗೌಳಿ ಗಲ್ಲಿಯಲ್ಲಿರುವ ಮನೆ ಎಂದರೆ ನಿಜ. ನಾವು ಎಲ್ಲರೂ ಕೂಡಿಕೊಂಡು ಅದೇ ಮನೆಯಲ್ಲಿ ವಾಸವಾಗಿದ್ದೆವು. ನಮ್ಮ ಮದುವೆಯಾದ ನಂತರ ಹೆಣ್ಣುಮಕ್ಕಳ ಮದ್ಯೆ ಹೊಂದಾಣಿಕೆಯಾಗದೇ ಇರುವ ಕಾರಣ ನಾವು ಬೇರೆ ಬೇರೆಯಾಗಿ ವಾಸವಾಗಿದ್ದೆವು ಎಂದರೆ ನಿಜ.

ನನ್ನದು ಹಾಗೂ 7ನೇಪ್ರತಿವಾದಿಯರದ್ದು ಒಂದು ಪಾಲುದಾರಿಕೆ ಸಂಸ್ಥೆ ಇತ್ತು. ಸದರೀ ಪಾಲುದಾರಿಕೆ ಸಂಸ್ಥೆಯು ಸನ್ 2016 ರಲ್ಲಿ ರದ್ದುಗೊಂಡಿರುತ್ತದೆ. ಮೇಲೆ ಹೇಳಿದ 10 ಬಟ್ಟೆ ಅಂಗಡಿಗಳನ್ನು ನಾವೆಲ್ಲರೂ ಕೂಡಿಕೊಂಡು ನಡೆಸುತ್ತಿದ್ದೆವು ಎಂದರೆ ಸಾಕ್ಷಿಯು ನಮ್ಮ ನಮ್ಮ ಅಂಗಡಿಗಳನ್ನು ನಾವು ನಡೆಸುತ್ತಿದ್ದೆವು ಎಂದು ನುಡಿಯುತ್ತಾರೆ.

ಮುಂಚೆ ನಮ್ಮ ತಂದೆ ಈರಪ್ಪ ಇವರು ಹಳ್ಳಿ ಹಳ್ಳಿಗೆ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು ನಾವು ಹುಟ್ಟುವ ಮುಂಚೆ ಅಂದರೆ ಸನ್ 1970 ಕ್ಕಿಂತ ಮುಂಚೆ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆಯ ಜೊತೆ ಅಣ್ಣಂದಿರಾದ ರಾಮಚಂದ್ರ ಮತ್ತು ಲಕ್ಷ್ಮಣ ಇಬ್ಬರೂ ವ್ಯಾಪಾರಕ್ಕೆ ಹೋಗುತ್ತಿದ್ದರು ಎಂದರೆ ನಿಜ. 1965 ರಲ್ಲಿ ಗೋಕಾಕ ಪಟ್ಟಣದಲ್ಲಿ ಅಷ್ಟೊಂದು ಬಟ್ಟೆ ಅಂಗಡಿಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸನ್ 1962-63 ರಲ್ಲಿ ಹಳ್ಳಿ ಹಳ್ಳಿಗೆ ವ್ಯಾಪಾರ ಮಾಡುತ್ತಿದ್ದರ ಅನುಭವದ ಮೇಲೆ

ಗೋಕಾಕದಲ್ಲಿ ದೆಹಲಿ ರೇಡಿಮೆಡ್ ಸ್ಟೋರ್ಸ ಅಂಗಡಿಯನ್ನು ಪ್ರಾರಂಭಿಸಿರುತ್ತಾರೆಂದರೆ ನಿಜ. ಸದರಿ ಬಟ್ಟೆ ಅಂಗಡಿಯಲ್ಲಿ ಚೆನ್ನಾಗಿ ವ್ಯಾಪಾರ ಆಗುತ್ತಿದ್ದುದರಿಂದ ಸನ್ 1971 ರಲ್ಲಿ ವಾದಿ ಕೋಣಪ್ಪ ಹಾಗೂ 7 ನೇ ಪ್ರತಿವಾದಿ ವಿಠ್ಠಲ ಇವರು ಮತ್ತೊಂದು ದಿಲ್ಲಿ ಕ್ಲಾಥ ಆ್ಯಂಡ ರೇಡಿಮೇಡ್ ಅಂಗಡಿಯನ್ನು ಪ್ರಾರಂಭಿಸಿರುತ್ತಾರೆಂದರೆ ಸಾಕ್ಷಿಯು ಸನ್ 1994 ರಲ್ಲಿ ವಾದಿ ಕೋನಪ್ಪ ಮಾತ್ರ ದಿಲ್ಲಿ ಟೆಕ್ಸಟೈಲ ಎಂಬ ಹೆಸರಿನ ಅಂಗಡಿಯನ್ನು ಪ್ರಾರಂಭಿಸಿರುತ್ತಾನೆಂದು ನುಡಿಯುತ್ತಾರೆ.

ಸಿಟಿಎಸ್ ನಂಬರ 3301 ರಲ್ಲಿ ಮನೆ ಇರುತ್ತದೆ. ಸದರೀ ಮನೆಯಲ್ಲಿ ನಮ್ಮ ತಂದೆ-ತಾಯಿ, ರಾಮಚಂದ್ರ, ಲಕ್ಷ್ಮಣ, ಕೋನಪ್ಪ, ಶಂಕರ ಹಾಗೂ ಸುನೀಲ ವಾಸವಾಗಿದ್ದರು ಎಂದರೆ ನಿಜ. ಸದರೀ ಮನೆಯನ್ನು ತೆಗೆದು ಪ್ರಶಾಂತ ಲಾಡ್ಜ ಪ್ರಾರಂಭಸಿರುತ್ತೇವೆ ಎಂದರೆ ನಿಜ. ಸದರೀ ಲಾಡ್ಜನ್ನು 11 ನೇಪ್ರತಿವಾದಿ ಸುನೀಲ ನೋಡಿಕೊಳ್ಳುತ್ತಿದ್ದನು. ಸದರೀ ಲಾಡ್ಜನಿಂದ ಒಳ್ಳೆಯ ಆದಾಯ ಇತ್ತು. ಸದರೀ ಲಾಡ್ಜನ್ನು ಬಂದು ಮಾಡಿ ಈಗ 05 ವರ್ಷಗಳಿಂದ ಒಂದು ಬಟ್ಟೆ ಅಂಗಡಿ ಹಾಗೂ ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದೇವೆ. ಮೇಲೆ ಹೇಳಿದ ಸಿಟಿಎಸ್ ನಂಬರ 3301 ನಮ್ಮ ತಂದೆಗೆ ಹೇಗೆ ಬಂದಿರುತ್ತದೆಂದು ಇವತ್ತಿನವರೆಗೂ ನಾನು ವಿಚಾರಿಸಿ ತಿಳಿದುಕೊಂಡಿರುವುದಿಲ್ಲ.

ಸದರಿ ಸಿಟಿಎಸ್ ನಂಬರ 3301 ರ ಪಕ್ಕದಲ್ಲಿ ಇನ್ನೊಂದು ಕಮತಗೌಡಾ ಎನ್ನುವವರ ಜಾಗಾ ಇದ್ದು, ಅದನ್ನು ನಮ್ಮ ಅಣ್ಣಂದಿರಾದ ರಾಮಚಂದ್ರ ಮತ್ತು ಲಕ್ಷ್ಮಣ ರವರು 1975 ರಲ್ಲಿ ಖರೀದಿಸಿರುತ್ತಾರೆ. ಸದರೀ ಜಾಗೆಯಲ್ಲಿ ನಂತರ ಮನೆ ಕಟ್ಟಿಸಿರುತ್ತಾರೆಂದರೆ ನಿಜ. ಆ ಮನೆಯಲ್ಲಿ ನಾವು ಎಲ್ಲರೂ ಕೂಡಿಕೊಂಡು ವಾಸವಾಗಿದ್ದೆವು ಎಂದರೆ ನಿಜ. ಸದರೀ ಕಮತಗೌಡಾರವರ ಜಾಗೆಯ ಪಕ್ಕದಲ್ಲಿ

ಜನತಾ ಕೋಲ್ಡ್ರಿಂಕ್ಸ ಹೌಸ್ ಅಂಗಡಿ ಇತ್ತು ಎಂದರೆ ನಿಜ. ಸದರೀ ಅಂಗಡಿಯು ನಮ್ಮ ಅಣ್ಣಂದಿರಾದ ರಾಮಚಂದ್ರ ಮತ್ತು ಲಕ್ಷ್ಮಣರವರ ಹೆಸರಿಗೆ ಇತ್ತು. ಸದರಿ ಕೋಲ್ಡಿಂಕ್ಸ ಹೌಸ್ ಅಂಗಡಿಯನ್ನು ತೆಗೆದು ದಿಲ್ಲಿ ಕ್ರಿಯೇಷನ್ಸ ಎಂಬ ಹೆಸರಿನ ಬಟ್ಟೆ ಅಂಗಡಿಯನ್ನು ನಡೆಸುತ್ತಿದ್ದೇವೆ. ಸದರೀ ಮೇಲೆ ಹೇಳಿದ ಎಲ್ಲಾ ಅಂಗಡಿಗಳು ಪ್ರಾರಂಭವಾದಾಗ ನಮ್ಮ ತಂದೆಯವರು ಬದುಕಿದ್ದರು. ಸನ್ 2012 ರವರೆಗೆ ನಮ್ಮ ಎಲ್ಲಾ ಅಣ್ಣತಮ್ಮಂದಿರರ ಸಂಬಂಧ ಚೆನ್ನಾಗಿ ಇತ್ತು. ನಮ್ಮ ನಮ್ಮ ವ್ಯವಹಾರಗಳಿಗೆ ಯಾರೂ ಒಬ್ಬರಿಗೊಬ್ಬರು ತಕರಾರು ಮಾಡುತ್ತಿರಲಿಲ್ಲ.

ರಾಮಚಂದ್ರ ಹಾಗೂ ಲಕ್ಷ್ಮಣ ಇಬ್ಬರು ಯಾವ ವರ್ಷದಲ್ಲಿ ಹುಟ್ಟಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಸನ್ 1982 ರಲ್ಲಿ 7 ನೇ ಪ್ರತಿವಾದಿ ವಿಠ್ಠಲನ ಹೆಸರು 26 ವರ್ಷ ಇದ್ದವು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ವಾದಿ ಕೋನಪ್ಪ 7 ನೇ ಪ್ರತಿವಾದಿಗಿಂತ 03 ವರ್ಷ ಚಿಕ್ಕಪ್ಪನು. ಸನ್ 1982 ರಲ್ಲಿ ಕೋನಪ್ಪನ ವಯಸ್ಸು 23 ವರ್ಷ, 10 ನೇ ಪ್ರತಿವಾದಿ ಶಂಕರೆಪ್ಪನ ವಯಸ್ಸು 21 ವರ್ಷ ಹಾಗೂ 11ನೇ ಪ್ರತಿವಾದಿಯ ವಯಸ್ಸು 19 ವರ್ಷ ಎಂದರೆ ಇರಬಹುದು.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ